ಸಾಕ್ಷಿಯನ್ನು ಕರೆಸಿ ದಿಃ 12/07/2018 ರಂದು ಪ್ರಮಾಣವಚನ ಮಾಡಿಸಲಾಯಿತು.

**ಮುಂದುವರದೆ ಪಾಟೀ ಸವಾಲುಃ 1ನೇ ಪ್ರತಿವಾದಿಯ ಪರವಾಗಿ ಶ್ರೀ. ಎಂ.ಆರ್. ವಕೀಲರಿಂದಃ**

15) ನನ್ನ ಅಣ್ಣನಾದ ಕೃಷ್ಣಮೂರ್ತಿ ಶಿವಮೊಗ್ಗದಲ್ಲಿ ಬಸ್ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದರು. ನನ್ನ ಸದ್ರಿ ಅಣ್ಣ ತೀರಿಕೊಳ್ಳುವವರೆಗೆ ಶಿವಮೊಗ್ಗದಲ್ಲಿಯೇ ಇದ್ದರು ಎಂದರೆ ಸರಿ. ನನ್ನ ಸದ್ರಿ ಅಣ್ಣನಿಗೆ ಎರಡು ಗಂಡು ಮತ್ತು ಎರಡು ಹೆಣ್ಣುಮಕ್ಕಳು ಎಂದರೆ ಸರಿ. ನನ್ನ ಸದ್ರಿ ಅಣ್ಣನ ಒಂದು ಗಂಡು ಮತ್ತು ಒಂದು ಹೆಣ್ಣು ಸಾಗರದಲ್ಲಿ ಹುಟ್ಟಿರುತ್ತಾರೆ. ನನ್ನ ಸದ್ರಿ ಅಣ್ಣನ ಎಲ್ಲಾ ಮಕ್ಕಳ ವಿದ್ಯಾಭ್ಯಾಸ ಶಿವಮೊಗ್ಗದಲ್ಲಿ ಆಗಿರುತ್ತದೆ. ನನ್ನ ಸದ್ರಿ ಅಣ್ಣನ ಒಬ್ಬ ಮಗ ಭಟ್ಕಳದಲ್ಲಿ ಇನ್ನೊಬ್ಬ ಮಗ ಬೆಂಗಳೂರಿನಲ್ಲಿ ಇದ್ದಾರೆ ಎಂದರೆ ಸರಿ. ನನ್ನ ಸದ್ರಿ ಅಣ್ಣನ ಒಬ್ಬ ಮಗಳನ್ನು ಬೆಂಗಳೂರಿಗೆ ಹಾಗು ಇನ್ನೊಬಳನ್ನು ಕುಂದಾಪುರಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ.

16) ಲಕ್ಕವಳ್ಳಿಯಿಂದ ನನ್ನ ಅಣ್ಣನಾದ ರಾಮಚಂದ್ರ ಬೆಂಗಳೂರಿಗೆ ಹೋಗಿರುತ್ತಾರೆ. ನನ್ನ ಸ ದ್ರಿ ಅಣ್ಣನಿಗೆ ಎರಡು ಹೆಣ್ಣು ಹಾಗು ಎರಡು ಗಂಡು ಮಕ್ಕಳು ಎಂದರೆ ಸರಿ. ನನ್ನ ಸದ್ರಿ ಅಣ್ಣನ ಎಲ್ಲಾ ಮಕ್ಕಳು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸರಿ. ನನ್ನ ಸದ್ರಿ ಅಣ್ಣ ಬೆಂಗಳೂರಿನಲ್ಲಿ ತೀರಿ ಹೋಗಿರುತ್ತಾರೆ ಎಂದರೆ ಸರಿ.

17) 1980-81 ನೇ ಸಾಲಿನಲ್ಲಿ ನನ್ನ ಅಣ್ಣನಾದ 2ನೇ ಪ್ರತಿವಾದಿ ಸಾಗರದ ಎಸ್.ಎನ್. ನಗದಲ್ಲಿರುವ ಕಟ್ಟಿಸಿದ ಮನೆಯನ್ನು ಖತೀಜಾಬಿ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. 4ನೇ ಪ್ರತಿವಾದಿಯು 1976ನೇ ಇಸವಿಯಲ್ಲಿ ಎಸ್.ಎನ್. ನರದ ಮೊದಲನೇ ಕ್ರಾಸಿನಲ್ಲಿ ಮೂರ್ತಿ ರಾವ್ ರವರ ಮನೆಯಲ್ಲಿ ಬಾಡಿಗೆಗೆ ಇದ್ದರು ಎಂದರೆ ಸರಿ. 4ನೇ ಪ್ರತಿವಾದಿಯು 1982ನೇ ಇಸವಿಯಲ್ಲಿ ಸಾಗರದ ಎಸ್.ಎನ್.ನಗರದಲ್ಲಿ ನಿವೇಶನವನ್ನು ಖರೀದಿ ಮಾಡಿ ಅದರಲ್ಲಿ ಮನೆಯನ್ನು ಕಟ್ಟಿಸಿ ಅಲ್ಲಿ ಅವರು 2013ನೇ ಇಸವಿಯವರೆಗೆ ವಾಸ ಮಾಡಿದ್ದರು ಎಂದರೆ ಸರಿ.

18) ನನಗೆ ಇಬ್ಬರು ಗಂಡು ಮಕ್ಕಳು. ನನಗೆ ಹೆಣ್ಣು ಮಕ್ಕಳು ಇಲ್ಲ, ನನ್ನ ಮೊದಲನೇ ಮಗನಿಗೆ ಈಗ 30 ವರ್ಷ ಹಾಗು ನನ್ನ ಎರಡನೇ ಮಗನಿಗೆ ಈಗ 28 ವರ್ಷ ವಯಸ್ಸು. ನನ್ನ ದೊಡ್ಡ ಮಗ ಬಿ.ಕಾಂ ಹಾಗು ನನ್ನ ಎರಡನೇ ಮಗ ಎಸ್.ಎಸ್.ಎಲ್.ಸಿ ಯವರೆಗೆ ಓದಿರುತ್ತಾರೆ. ನನ್ನ ಸದ್ರಿ ಮಕ್ಕಳ ವಿದ್ಯಾಭ್ಯಾಸ ಶಿವಮೊಗ್ಗದಲ್ಲಿ ಆಗಿರುತ್ತದೆ ಎಂದರೆ ಸರಿ. ನನ್ನ ಸದ್ರಿ ಮಕ್ಕಳು ನನ್ನ ಮತ್ತು ನನ್ನ ಹೆಂಡತಿ ಜೊತೆಯಲ್ಲಿ ಇದ್ದುಕೊಂಡು ವಿದ್ಯಾಭ್ಯಾಸ ಮಾಡಿರುತ್ತಾರೆ. ನಾನು 1982ನೇ ಇಸವಿಯಿಂದ ಇಲ್ಲಿಯವರೆಗೆ ಶಿವಮೊಗ್ಗದಲ್ಲಿ ವಾಸ ಮಾಡುತ್ತಿದ್ದೇನೆ. ನಾನು ಮತ್ತು ನನ್ನ ಸಹೋದರರು ನಮ್ಮ ನಮ್ಮ ಸ್ವಂತ ದುಡಿಮೆಯಿಂದ ಜೀವನವನ್ನು ನಡೆಸುತ್ತಾ ಬಂದಿರುತ್ತೇವೆ ಎಂದರೆ ಸರಿ. ನಾನು ಮತ್ತು ನನ್ನ ಸಹೋದರರು ಪರಸ್ಪರರನ್ನು ಅವಲಂಬಿಸಿರುವುದಿಲ್ಲ.

19) 1984 ನೇ ಇಸವಿಯಲ್ಲಿ ದಾವಾ ಸ್ವತ್ತಿನ ನಿವೇಶನ ಮೌಲ್ಯವಾದ 1,700 ರೂಪಾಯಿಯನ್ನು ನಾನು 1ನೇ ಪ್ರತಿವಾದಿಗೆ ಕೊಟ್ಟಿರುತ್ತೇನೆ. ಈ ವಿಷಯವನ್ನು ನನ್ನ ವಾದಪತ್ರವನ್ನು ಬರೆಸುವಾಗ ನನ್ನ ವಕೀಲರಿಗೆ ಹೇಳಿರುತ್ತೇನೆ. ನನ್ನ ತಂದೆ ತೀರಿ ಹೋದ ನಂತರ ದಾವಾ ಸ್ವತ್ತಿನ ಕಂದಾಯ ಹಾಗು ವಿದ್ಯುಚಕ್ತಿ ಬಿಲ್ಲನ್ನು 1ನೇ ಪ್ರತಿವಾದಿ ಪಾವತಿ ಮಾಡುತ್ತಿದ್ದಾರೆ. ನನ್ನ ತಂದೆಯವರು ಇದ್ದಾಗಲೂ ಸಹ ದಾವಾ ಸ್ವತ್ತಿನ ಕಂದಾಯ ಹಾಗು ವಿದ್ಯುಚಕ್ತಿ ಬಿಲ್ಲನ್ನು 1ನೇ ಪ್ರತಿವಾದಿಯೇ ಪಾವತಿ ಮಾಡುತ್ತಿದ್ದರು ಎಂದರೆ ಸರಿಯಲ್ಲ, ಆ ಸಂದರ್ಭದಲ್ಲಿ ದಾವಾ ಸ್ವತ್ತಿನ ಕಂದಾಯ ಹಾಗು ವಿದ್ಯುಚಕ್ತಿ ಬಿಲ್ಲನ್ನು 3ನೇ ಪ್ರತಿವಾದಿ ಪಾವತಿ ಮಾಡುತ್ತಿದ್ದರು. ಆ ರೀತಿ ದಾವಾ ಸ್ವತ್ತಿನ ಕಂದಾಯ ಹಾಗು ವಿದ್ಯುಚಕ್ತಿ ಬಿಲ್ಲನ್ನು 3ನೇ ಪ್ರತಿವಾದಿ ಪಾವತಿ ಮಾಡಿರುವ ಬಗ್ಗೆ ದಾಖಲೆಗಳು ಇಲ್ಲ.

20) 1960ನೇ ಇಸವಿಯಲ್ಲಿ ನನ್ನ ವಯಸ್ಸು 6 ವರ್ಷ ಆಗಿತ್ತು, 1960ನೇ ಇಸವಿಯಲ್ಲಿ ದಾವಾ ನಿವೇಶನವನ್ನು ಯಾರು ಗುರುತಿಸಿ, ಸ್ವಚ್ಛಗೊಳಿಸಿದ್ದು ಹಾಗು ಮನೆ ನಿರ್ಮಿಸಿದ್ದು ಯಾರು ಎಂದು ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ, 1960ನೇ ಇಸವಿಯಲ್ಲಿ ನನ್ನ ಅಣ್ಣಂದಿರಾದ ಕೃಷ್ಣಮೂರ್ತಿ ಮತ್ತು ರಾಮಚಂದ್ರರವರನ್ನು ಬಿಟ್ಟು ನಮ್ಮ ಕುಟುಂಬದಲ್ಲಿ 1ನೇ ಪ್ರತಿವಾದಿಯು ಮಾತ್ರ ದುಡಿಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ, ಈಗ್ಗೆ ಸುಮಾರು 7 ರಿಂದ 8 ವರ್ಷಗಳ ಹಿಂದೆ ದಾವಾ ಸ್ವತ್ತಿನ ಎದುರುಗಡೆ ಒಂದು ಮಳಿಗೆಯನ್ನು ಹಾಗು ಹಿಂದುಗಡೆ ಒಂದು ಸಣ್ಣ ಮನೆಯನ್ನು 1ನೇ ಪ್ರತಿವಾದಿಯು ಕಟ್ಟಿಸಿರುತ್ತಾರೆ. ಆ ಸಂದರ್ಭದಲ್ಲಿ ನಾನಾಗಲೀ ನನ್ನ ಉಳಿದ ಸಹೋದರರಾಗಲಿ ಸದ್ರಿ ಅಂಗಡಿ ಮತ್ತು ಮನೆಯನ್ನು ಯಾಕೆ ಕಟ್ಟುತ್ತಿದ್ದೀರಾ ಎಂದು ತಕರಾರು

ಮಾಡಿರುವುದಿಲ್ಲ. ಆ ಸಂದರ್ಭದಲ್ಲಿ ದಾವಾ ಆಸ್ಥಿಯಲ್ಲಿ ನಮಗೂ ಹಕ್ಕು ಇದೆ ಎಂದು ನಾನಾಗಲೀ ನನ್ನ ಉಳಿದ ಸಹೋದರರಾಗಲಿ ಪ್ರತಿಪಾದನೆ ಮಾಡಿಲ್ಲ. ದಾವಾ ಸ್ವತ್ತಿನಲ್ಲಿರುವ ನಿವೇಶನವನ್ನು ಗುರುತಿಸಿ, ಸ್ವಚ್ಛಗೊಳಿಸಿ, ಮನೆಯನ್ನು 1ನೇ ಪ್ರತಿವಾದಿಯೇ ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರದೆದು ಹೇಳುತ್ತಾರೆ ಗುರುತಿಸಿ, ಸ್ವಚ್ಚಗೊಳಿಸಿ, ಮನೆಯನ್ನು ತನ್ನ ತಂದೆ ಕಟ್ಟಿಸಿರುತ್ತಾರೆ ಎಂದು.

21) 1960ನೇ ಇಸವಿಯಿಂದ ಇಲ್ಲಿಯವರೆಗೆ ನಿರಂತರವಾಗಿ ದಾವಾ ಸ್ವತ್ತಿನಲ್ಲಿ 1ನೇ ಪ್ರತಿವಾದಿ ಮತ್ತು ಅವರ ಕುಟುಂಬಂವರು ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹೇಳುತ್ತಾರೆ ತಾನು ಮತ್ತು ತನ್ನ ಉಳಿದ ಸಹೋದರರು ದಾವಾ ಸ್ವತ್ತಿಗೆ ಬಂದು ಹೋಗುತ್ತಿದ್ದೇವೆ ಎಂದು. ದಾವಾ ಸ್ವತ್ತಿನಲ್ಲಿ 1ನೇ ಪ್ರತಿವಾದಿಯ ಸತತವಾದ ಸ್ವಾಧೀನವನ್ನು ಗುರುತಿಸಿ ನಗರಸಭೆಯವರು ಸದ್ರಿ ಸ್ವತ್ತನ್ನು 1ನೇ ಪ್ರತಿವಾದಿಗೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ 1ನೇ ಪ್ರತಿವಾದಿಯು ಸತತವಾದ ಸ್ವಾಧೀನವನ್ನು ಗುರುತಿಸಿ ಪುರಸಭೆಯವರು ದಾವಾ ಸ್ವತ್ತಿನ ಕ್ರಯ ಪತ್ರವನ್ನು 1ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ದಾವಾ ಸ್ವತ್ತು ನಮಂ ಒಟ್ಟು ಕುಟುಂಬದ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು 1ನೇ ಪ್ರತಿವಾಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ.

22) 2ನೇ ಪ್ರತಿವಾದಿಯ ಖತೀಜ ರವರಿಂದ ಖರೀದಿ ಮಾಡಿದ ಸ್ವತ್ತು ನಮ್ಮ ಒಟ್ಟು ಕುಟುಂಬದ ಸ್ವತ್ತು ಆಗಿರುವುದಿಲ್ಲ. ನನ್ನ ಪ್ರಕಾರ 3ನೇ ಪ್ರತಿವಾದಿಯು ಖರೀದಿ ಮಾಡಿ ಮನೆ ಕಟ್ಟಿಸಿರುವ ಸ್ವತ್ತು ನಮ್ಮ ಒಟ್ಟು ಕುಟುಂಬದ ಸ್ವತ್ತು ಆಗಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ನನಗಾಗಲೀ ನನ್ನ ಇತರ ಸಹೋದರರಿಗಾಲೀ ಯಾವುದು ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು 1ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಆಗಿರುವುದರಿಂದ ನಾನಾಗಲೀ ನನ್ನ ಇತರೆ ಸಹೋದರರಾಗಲಿ ಈ ದಾವೆಯಲ್ಲಿ ಕೇಳಿರುವ ಯಾವುದೇ ಪರಿಹಾರವನ್ನು ಪಡೆಯಲು ಅರ್ಹರಿಲ್ಲ ಎಂದರೆ ಸರಿಯಲ್ಲ.

**ಉಳಿದ ಪ್ರತಿವಾದಿಗಳಾಗಲಿ ಅವರ ವಕೀಲರಾಗಲಿ ಹಾಜರಿರುವುದಿಲ್ಲ ಹಾಗು ಅವರನ್ನು ಯಾರು ಪ್ರತಿಸಿಧಿಸಿರುವುದಿಲ್ಲ. ಆದ್ದರಿಂದ ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿದೆ.)

ಓ ಹೇ ಕೇ ಸರಿ ಇದೆ ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಾಗರ.